ಸರ್ಕಾರಕ್ಕೆ ಇಲ್ಲ ಎಂದು ಹೇಳಿದ್ದಾರೆ, ಆದರೂ ಕೂಡ ಸರ್ಕಾರದವರು ಕೊಟ್ಟಿಂಥ ಹಣವನ್ನು ಉಪಯೋಗಿಸಿ ಜಾಗಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟುವಾಗ ಸರ್ಕಾರದ ಕಮಿಟಮೆಂಟ್ ಇದ್ದೇ ಇರುತ್ತದೆ, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಉಪಯೋಗಿಸುವ ಹೆಚ್ಚಿನ ಭಾಗ ಹಣ ಸರ್ಕಾರದ ಹಣ ಇರುತ್ತದೆ. ಈ ಬೋರ್ಡಿನಲ್ಲಿ ಅಧಿಕಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆ ರೀತಿ ಮಾಡಿರುವುದು ಸರಿ ಎಂದು ಭಾವಿಸುತ್ತೇನೆ. ಆದರೆ ಯಾವ ನೇಮಕಾತಿ ಮಾಡಬೇಕಾದರೂ ಕೂಡ ಸರ್ಕಾರದ ಅನುಮತಿ ತೆಗೆದುಕೊಳ್ಳಬೇಕೆಂದು ಇದೆ, ಹೀಗೆ ನೇಮಕಾತಿಯಲ್ಲಾಗಲಿ. ಒಂದು ಪ್ರೊಗ್ರಾಂ ಮಾಡುವುದರಲ್ಲಾಗಲಿ, ಅಥವಾ ಅವರು ಮಾಡುವ ಪ್ರತಿಯೊಂದು ವಿಚಾರದಲ್ಲಿಯಾಗಲಿ, ಸರ್ಕಾರ ತನ್ನ ಹಸ್ತಕ್ಷೇಪ ಮಾಡತಕ್ಕದ್ದು ಎಂದು ಇರುವಾಗ ಅದು ಯಾವ ರೀತಿ ಸ್ವಾಚ್ಛುಟರಿ ಬೋರ್ಡಾಗುತ್ತದೆ. ಕೊನೆಯದಾಗಿ ನಾನು ಕೇಳತಕ್ಕದ್ದು ಇಷ್ಟೇ, ಅನೇಕರು ಹೌಸಿಂಗ್ ಬೋರ್ಡನ್ನು ನಂಬಿಕೊಂಡು ತಮಗೆ ಇರತಕ್ಕ ಅಲ್ಪಸ್ವಲ್ಪ ದುಡ್ಡನ್ನು ಹಾಕಿ ಸೈಟುಗಳನ್ನು ತೆಗೆದುಕೊಂಡು ಸಾಲಕ್ಕಾಗಿ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಹಿಂದೆ ಮುಖ್ಯ ಮಂತ್ರಿಗಳು ಮಾರ್ಚ್ ತಿಂಗಳ ವರೆಗೆ ಯಾರು ಯಾರು ಅರ್ಜಿ ಹಾಕಿದ್ದಾರೋ ಅವರಿಗೆ ಸಾಲ ಕೊಡುತ್ತೇವೆಂದು ಒಂದು ಆಶ್ವಾಸನೆ ಕೊಟ್ಟಿದ್ದರು. ಅನೇಕ ಬಡವರು ಈ ರೀತಿ ಸೈಟುಗಳನ್ನು ತೆಗೆದುಕೊಂಡಿರುವವರಿದ್ದಾರೆ. ಅವರಲ್ಲಿ ಹಣವಂತರು ಇದ್ದಾರೆ ಅವರಿಗೆ ಸಹಾಯಮಾಡಿ ಎಂದು ಹೇಳುವುದಿಲ್ಲ. ತಾವು ಎಷ್ಟು ಪೆಂಡಿಂಗ್ ಅರ್ಜಿಗಳು ಇವೆ ಎಂದು ನೋಡಿ ಯಾರಿಗೆ ನ್ಯಾಯವಾದಂತ ರೀತಿಯಲ್ಲಿ ಸಾಲವನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಇನ್ನೂ ಒಮ್ಮೆ ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

Mr. Deputy Speaker :—The Hon. Member may continue his speech tomorrow. The Hon. Minister for Public Works will now make a statement.

STATEMENT BY THE MINISTER FOR PUBLIC WORKS AND ELECTRICITY

Re : Enquiry by the Vigilance Commissioner in regard to missing of Cement and Steel.

Sri H. M. CHANNABASAPPA :—Mr. Deputy Speaker, I promised to make a statement on the progress made in regard to the investigation. I will read it :

On receipt of phone message from Government on the afternoon of 20-3-1974, the Superintending Engineer, Technical Audit Cell, State Vigilance Commission, proceeded immediately to the Division Offices and took charge of necessary records pertaining to cement and steel, *viz.*, the indent, invoices, stock, issue registeres, etc. The Executive Engineer, Bangalore Division, was also asked to arrange for the necessary labour and lorries for weighing the steel the next morning. On 21-3-1974 at about 9.30 a. m. five lorries and the services of 25 labourers were utilised for weighing about 15 tonnes of steel upto noon today. About 60 to 65 tonnes have yet to be weighed. Much of the steel which is not in good condition could not be easily lifted in the lorries as they had been twisted and stocked there. Therefore, considerable time is being taken to complete the weighment. The Vigilance Commissioner has inspected these spots this morning By increasing the labour strength and indenting for two trailors from Karnataka Electricity Board to facilitate movement of longer lengths of steel to the weighing

bridges, it is expected that the weighment at site could be completed by the evening of 22nd instant. After field verification of steel and cement and checking up of measurements with the actual work done, it will take another three or four days for determining whether there is any shortage in the actual steel and cement available at site with reference to the issue made and work turned out at site.

ಶ್ರೀ ಕಾಗೋಡು ತಿಮ್ಮಪ್ಪ :—ತಾವು ಸಿಮೆಂಟ್ ಎಷ್ಟು ಸ್ಟಾಕ್ ಇದೆ ಎನ್ನುವುದನ್ನು ಹೇಳಲಿಲ್ಲ.

Sri H. M. CHANNABASAPPA.—I promised to make a statement on what has been in progress till the evening as found out by the Vigilance Commissioner. He has just now sent this information. I cannot add anything further.

ಶ್ರೀ ಕಾಗೋಡು ತಿಮ್ಮಪ್ಪ :—ಕಬ್ಬಿಣದ ತೂಕ ಮಾಡುವುದು ಸ್ವಲ್ಪ ಕಷ್ಟವಾಗಬಹುದು, ತಾವು ಹೇಳುವುದು ಒಂದು ರೀತಿಯಿಂದ ನಂಬಬಹುದು ಎಂದು ತಿಳಿದುಕೊಳ್ಳೋಣ. ಸಿಮೆಂಟನ್ನು ಲೆಕ್ಕ ಮಾಡುವುದರಲ್ಲಿ ಅಂಥ ತೊಂದರೆಯಾಗುವುದಿಲ್ಲ. ಆದುದರಿಂದ ಮಾನ್ಯ ಕೃಷ್ಣರವರು ಹೇಳಿದ ಹಾಗೆ ನಮಗೆ ಎರಡನೇ ವರದಿ ಪ್ರಕಾರ ಎಷ್ಟು ಸಿಮೆಂಟ್ ಇಲಾಖೆಗೆ ಕೊಡಲಾಗಿದೆ. ಅಲ್ಲಿ ಕಂಡುಬಂದದ್ದು ಎಷ್ಟು ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ಎಷ್ಟು ಸಿಮೆಂಟನ್ನು ನಿಮ್ಮ ಇಲಾಖೆಗೆ ಕೊಟ್ಟಿದ್ದು, ಎಷ್ಟು ಸಿಮೆಂಟ್ ಇದೆ ಎನ್ನುವುದನ್ನು ೪ ಗಂಟೆಯೊಳಗೆ ತಿಳಿದುಕೊಂಡು ಹೇಳತಕ್ಕ ಕೆಲಸ. ಅದನ್ನು ಮಾಡುವುದಕ್ಕೆ ತೊಂದರೆ ಏನು ?

Sri H. M. CHANNABASAPPA.—I should enquire the Vigilance Commissioner further because I am just reading out what message he has sent. I am not an inspecting officer and I have not gone there and I do not know about it. It is the Vigilance Commissioner who is in charge of the whole thing and they have seized the records. I do not think I will be in a position to add anything to what he has stated.

ಶ್ರೀ ಕಾಗೋಡು ತಿಮ್ಮಪ್ಪ :—೧೦ ಗಂಟೆಗೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು ಎರಡು ಹಾಸ್ಟಲ್‌ಗಳಿಗೂ ಹೋಗಿ ಇನ್‌ವೆಸ್ಟಿಗೇಷನ್ ಮಾಡಿ ಚೆಕ್ ಮಾಡಿಕೊಂಡು ಬಂದಿದ್ದಾರೆ, ಅವರು ಬಂದು ಪರಿಶೀಲನೆ ಮಾಡಿಕೊಂಡು ಹೋಗಿದ್ದಾರೆ ಎಂದು ನಾವು ಅಲ್ಲಿಗೆ ಹೋಗಿದ್ದಾಗ ಕಂಡವರು ಹೇಳುತ್ತಾರೆ. ಇವತ್ತಿನವರೆಗೂ ಸಿಮೆಂಟ್ ಎಷ್ಟು ಇದೆ, ಎಷ್ಟು ಕೊಟ್ಟಿದ್ದು ಎಂಬುದನ್ನು ಸರ್ಕಾರ ಹೇಳುವುದಕ್ಕೆ ಆಗುವುದಿಲ್ಲವೆಂದರೆ ಯಾರಾದರೂ ನಂಬತಕ್ಕ ಮಾತೆ ?

Sri M. S. KRISHNAN :—The whole thing appears to be fishy. ನಾವು ನಿಂತುಕೊಂಡೇ ೩೫೦ ಬ್ಯಾಗ್ ಸಿಮೆಂಟ್ ಮೂಟೆಗಳು ಇವೆ ಎಂದು ಹೇಳಬಹುದು. ಅಂಥದರಲ್ಲಿ ಅವರ ಸ್ಟೇಟ್‌ಮೆಂಟಿನಲ್ಲಿ there is not even a mention about cement.

Sri H. M. CHANNABASAPPA.—He has mentioned about cement though he has not given the actual number of cement bags.

Sri KAGODU THIMMAPPA.—He has not stated what is the quantity of cement available on the spot and used. ಸರ್ಕಾರದವರು ನ್ಯಾಯವಾಗಿ ಮಾಡುತ್ತಿದ್ದಾರೆ ಎಂಬ ಅಭಿಪ್ರಾಯ ಬರುವ ರೀತಿಯೊಳಗೆ ಸರ್ಕಾರದ ಅಧಿಕಾರಿಗಳು ಮತ್ತು ತಾವು ವರ್ತಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ .—ಇದು ಸರ್ಕಾರದ ಅಧಿಕಾರಿಗಳ ವರದಿಯಲ್ಲ.

Sri S. M. KRISHNA.--On a point of order. When a certain thing is referred to the Vigilance Commission any crippling of his functioning would not be in the large interests of the State. The Vigilance Commissioner has seized the records as has been made out in the statement. It cannot be tampered with. Now the question raised by the Hon. member Sri Thimmappa is that no reference is made with reference to cement. We can ask the Vigilance Commissioner to give us information tomorrow. Actually the adjournment motion mentions about steel and no reference about cement.

Mr. Deputy SPEAKER.—You may seek clarification but don't make observations against the Vigilance Commission.

ಶ್ರೀ ಎಚ್. ಡಿ. ದೇವೇಗೌಡ :—ಸ್ಟೇಟ್‌ಮೆಂಟ್ ಮಾಡಬೇಕೆಂದು ನಿನ್ನೆ ನಾನು ಹೇಳಲಿಲ್ಲ. The bonafide of the statement itself is going to be doubted by us, because the person accused was not allowed to go with the vigilance Commissioner.

ಶ್ರೀ ಎಂ. ಎಸ್. ಕೃಷ್ಣನ್ :—ಎಷ್ಟು ಕೋಟಾ ಅಲಾಟ್ ಮಾಡಿದ್ದಾರೆ, ಎಷ್ಟು ಕಡಿಮೆ ಇದೆ ಎಂಬ ಅಂಕಿ ಅಂಶಗಳನ್ನು ಹೇಳಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :—೪,೦೦೦ ಸಿಮೆಂಟ್ ಮೂಟೆಗಳನ್ನು ಎಣಿಸುವುದು ಎಷ್ಟು ಹೊತ್ತು ಆಗುತ್ತದೆ?

ಶ್ರೀ ಡಿ. ದೇವರಾಜ ಅರಸ್ :—ದೇವೇಗೌಡರನ್ನು ಬಿಟ್ಟರೆ ಮೂರೇ ನಿಮಿಷದಲ್ಲಿ ಎಣಿಸಬಹುದೆನೋ ಅದು ನನಗೆ ಗೊತ್ತಿಲ್ಲ. ಆ ವಿಷಯವನ್ನು ವಿಜಿಲೆನ್ಸ್ ಕಮೀಷನ್ನಿನವರಿಗೆ ವಹಿಸಿದ್ದೇವೆ. ಅವರು ನಮ್ಮ ಕೈಕೆಳಗಿನ ಅಧಿಕಾರಿಗಳು ಅಲ್ಲ, ಅಂದರೆ ಸರ್ಕಾರದ ಡೈರೆಕ್ಷನ್ನಿನಲ್ಲಿ ಮಾಡಬೇಕೆಂದು ಇಲ್ಲ. ಅವರು ಅದನ್ನು ನೋಡುವುದಕ್ಕೆ ೨-೩ ದಿವಸ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ಅವರಿಗೆ ಎರಡೇ ದಿವಸದಲ್ಲಿ ಈ ಕೆಲಸವನ್ನು ಮಾಡಿ ಮುಗಿಸಿ ಎಂದು ಹೇಗೆ ಹೇಳುವುದಕ್ಕೆ ಆಗುತ್ತದೆ ? ವರದಿ ಬಂದಿರುವಷ್ಟು ಸಭೆಯ ಮುಂದಿಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ಕಬ್ಬಿಣ ತೂಕ ಮಾಡುವುದಕ್ಕೆ ಸಮಯ ತೆಗೆದುಕೊಳ್ಳಬಹುದು. ಆದರೆ ಸಿಮೆಂಟ್ ಎಣಿಸುವುದಕ್ಕೆ ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ :—ಒಂದೇ ನಿಮಿಷದಲ್ಲಿ ಮಾಡುವುದಕ್ಕಾಗುವುದಿಲ್ಲ. ನಿಮಗೆ ಅಷ್ಟು ಬೇಕಾದರೆ ಕೋರ್ಟಿಗೆ ಹೋಗಿ.

ಶ್ರೀ ಎಚ್. ಡಿ. ದೇವೇಗೌಡ:—ದೇವೇಗೌಡರು ಮೂರು ನಿಮಿಷಕ್ಕೆ ಎಣಿಸಬಹುದು. ಅವರು ೩೦ ದಿವಸಕ್ಕೆ ಎಣಿಸುತ್ತಾರೆ. ಎಣಿಸಿಕೊಳ್ಳಲಿ, ಬಿಡಿ.

ಶ್ರೀ ಡಿ. ದೇವರಾಜ ಅರಸ್:—ಆಗಲಿ ಬಿಡಿ. ೩೦ ದಿವಸಕ್ಕೆ ಎಣಿಸುತ್ತಾರೆ ಎಂದು ಹಾಗೆಯೇ ಇಟ್ಟು ಕೊಳ್ಳಿ.

ಶ್ರೀ ಸಿ. ಬೈರೇಗೌಡ: – ನಾವೆಲ್ಲಾ ಹೋಗುವುದಕ್ಕೆ ಮೊದಲು ನಿಮ್ಮ ಇಲಾಖಾ ಅಧಿಕಾರಿಗಳು ಹೋಗಿ ಕಬ್ಬಿಣ ಎಷ್ಟು ಇತ್ತು, ಸಿಮೆಂಟ ಎಷ್ಟು ಇತ್ತು ಎಂದು ಲೆಕ್ಕ ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ. ಆದುದರಿಂದ ಅವರ ಲೆಕ್ಕದ ಪ್ರಕಾರವೇ ಹೇಳಬಹುದಾಗಿತ್ತಲ್ಲಾ ?

Sri S. M. KRISHNA.—This is an interim report.

Sri D. DEVARAJ URS.—There is an allegation made. They have relied on that. I don't say we are not correct and somebody

else is correct, till it is proved. Let my Hon. friends have the patience till the full report is received. Simply because they have made an allegation, does it mean everything is false on this earth ?

(INTERRUPTIONS)

ಶ್ರೀ ಕಾಗೋಡು ತಿಮ್ಮಪ್ಪ:—ಅವರು ಈ ದೃಷ್ಟಿಯಿಂದ ಮಾತನಾಡುವುದಾದರೆ ನಾವು ಬೇರೆ ದೃಷ್ಟಿಯಿಂದ ಮಾತನಾಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್:—ವರದಿ ಬರುವವರೆಗೆ ಸಹನೆ ಇರಬೇಕು. ಈ ಕಾರ್ಯವನ್ನು ವಿಜಿಲೆನ್ಸ್ ಕಮೀಷನ್‌ಗೆ ವಹಿಸಿದ್ದೇವೆ. ಬೇಕಾದರೆ ಅವರನ್ನು ಇನ್ನೊಂದು ಸಾರಿ ಪ್ರಾರ್ಥನೆ ಮಾಡಿಕೊಂಡು ಆದಷ್ಟು ಜಾಗ್ರತೆ ವರದಿ ಕೊಡಿ ಎಂದು ಹೇಳಬಹುದು. ಅದು ಬಿಟ್ಟು ಈವೊತ್ತು ಸಾಯಂಕಾಲವೇ ವರದಿ ಕೊಡಲಿಲ್ಲ ಎಂದರೆ ನಾವು ಏನು ಮಾಡೋಣ ?

ಶ್ರೀ ಎಂ. ಎಸ್. ಕೃಷ್ಣನ್:—ಮಾನ್ಯ ಮುಖ್ಯ ಮಂತ್ರಿಗಳು ಈಗ ಹೇಳುತ್ತಾ ಇರುವುದನ್ನು ನೋಡಿದರೆ ಈವೊತ್ತಿನ ದಿವಸವೇ ಕೊಡಿ ಎಂದು ಜಬರದಸ್ತಿನಿಂದ ಮಾಡುವುದಕ್ಕಾಗುತ್ತದೆಯೇ ಎನ್ನುವ ಒಂದು ಧಾಟಿಯಲ್ಲಿ ಹೇಳಿದ್ದಾರೆ ಮತ್ತು ಇದನ್ನು ವಿಜಿಲೆನ್ಸ್ ಕಮೀಷನ್‌ಗೆ ವಹಿಸಿದ್ದೇವೆ ಎಂದು ಹೇಳಿದರೆ ನಂಬಬೇಕು. ನಂಬದೇ ಹೋದರೆ ನಾನೇನು ಮಾಡಲಿ ಎನ್ನುವ ಒಂದು ತರಹ ಧಾಟಿಯಲ್ಲಿ ಒಂದು ಜಬರದಸ್ತಿನಿಂದ ಮಾತನಾಡಿದರು. ನನಗೆ ಇದರಲ್ಲಿ ನಂಬಿಕೆ. ಅಪನಂಬಿಕೆ ಅನ್ನುವ ಪ್ರಶ್ನೆ ಅಲ್ಲ, ಅವರು ಆರೀತಿ ಹೇಳುವುದಾದರೆ ನಾವು ಆಷ್ಟು ತೀವ್ರವಾಗಿ ನಂಬಿಕೆ ಇಲ್ಲದೇ ಇರುವ ರೀತಿಯಲ್ಲಿ ಭಾವನೆ ಹೊಂದಿದ್ದೇವೆಯೇ ಎನ್ನುವ ಪ್ರಶ್ನೆ ಬರುತ್ತದೆ. ವಿಜಿಲೆನ್ಸ್ ಕಮೀಷನ್‌ಗೆ ಈ ಕೆಲಸವನ್ನು ವಹಿಸಿದಾಗ ಸ್ಟೀಲ್ ಏನಾದರೂ ಬಿದ್ದಿದ್ದರೆ ಅದನ್ನು ತಕ್ಷಣ ತೂಕ ಮಾಡುವುದಕಾಗುವುದಿಲ್ಲ. ಸಮಯ ಬೇಕಾಗುತ್ತದೆ ಎನ್ನುವುದೂ ನಮಗೆ ಗೊತ್ತಿದೆ. ನಾವು ಅಲ್ಲಿ ಹೋಗಿ ನೋಡಿದಾಗ ೩೫೦ ಚೀಲ ಸಿಮೆಂಟ್ ಇತ್ತು ಎಣಿಸಿಕೊಂಡು ಬಂದಿದ್ದೇವೆ. ಅದನ್ನು ಎಣಿಸುವುದಕ್ಕೆ ಸಮಯ ಬೇಕು ಎಂದರೆ ಇದು ಏನು ರೀತಿಯೋ, ಯಾವ ರೀತಿಯೋ ಏನೋ ನನಗೆ ಗೊತ್ತಿಲ್ಲ.

Mr. Deputy SPEAKER.—The Hon. Member, Sri M. S. Krishnan is trying to enter into dialogue.

ಶ್ರೀ ಡಿ. ದೇವರಾಜ ಅರಸ್:—ಈ ಕ್ರಾಸ್ ಎಕ್ಸಾಮಿನೇಷನ್‌ನನ್ನು ವರದಿ ಬಂದ ಮೇಲೆ ಆಮೇಲೆ ಮಾಡಿಕೊಳ್ಳಿ. Does the Hon. Member think that the Government has told the Vigilance Commission not to count this and not to give the report ? Let the Hon. Member know that nowhere the Government have given such a direction.

Sri M. S. KRISHNAN.—I would judge only on the basis of the perfomance. ತಾವು ರೆಕಾರ್ಡ ನೋಡಿದರೆ ಗೊತ್ತಾಗುತ್ತದೆ. ಅವರು ಒಂದು ಇಂಟೀರಿಯಮ್ ರಿಪೋರ್ಟ ಕೊಟ್ಟರು. ಈ ರೀತಿ ಒಂದು ರಿಪೋರ್ಟ ಕೊಟ್ಟಿರುವಾಗ ಅದನ್ನು ನಂಬುವುದಕ್ಕಾಗುವುದಿಲ್ಲ ಎಂದರೆ ಹೇಗೆ ?

ಶ್ರೀ ಡಿ. ದೇವರಾಜ ಅರಸ್:—ಸರ್ಕಾರ ಹೇಳಿದ್ದನ್ನು ನಂಬುವುದಕ್ಕೆ ಸಾಧ್ಯವಿಲ್ಲ ಎಂದರೆ ನೀವು ಹೇಳಿದ್ದೆಲ್ಲವನ್ನೂ ನಾವು ನಂಬಬೇಕೇ ?

Mr. Deputy SPEAKER.—Why the Hon. Member Sri Krishnan is trying to draw inference when there is no scope ?

Sri M. S. KRISHNAN.—This is an open inference because the Hon. Ministers have stated yesterday that within 24 hours they will see to it that a report is given.

Mr. Deputy SPEAKER.—I have understood everything. The Hon. Member is putting in the mouth of the Hon. Minister of

Public Works which he has not said like that. Let us hear from the Hon. Minister.

ಶ್ರೀ ಎಂ. ಎಸ್. ಕೃಷ್ಣನ್:—ಹಾಗಾದರೆ ಅವರು ಹೇಳಿದ್ದೆಲ್ಲವನ್ನೂ ನಾವು ನಂಬಬೇಕೇ ? ಆಧಾರ ಇಲ್ಲದೇ ಇರುವ ಅಪಾದನೆ ಮಾಡುತ್ತಾ ಇರುವುದನ್ನು ನಾವು ನಂಬಬೇಕೇ ?

Sri D. DEVARAJ URS.—Don't say like that.

ಶ್ರೀ ಎಚ್. ಡಿ. ದೇವೇಗೌಡ:—ಆಧಾರ ಇಲ್ಲದೆ ಅಪಾದನೆ ಮಾಡಿದರೆ ಅವರು ಅದರ ಮೇಲೆ ಆಗತಕ್ಕ ಪರಿಣಾಮ ಎದುರಿಸಿಕೊಳ್ಳಬಹುದು. ನಾವು ಮಾಡಿರತಕ್ಕಂಥ ಅಪಾದನೆ ಮಂತ್ರಿಗಳ ಮೇಲೆ. ವಿಜಿಲೆನ್ಸ್ ಕಮೀಷನ್‌ನವರು ಮಂತ್ರಿಗಳ ಮೇಲೆ ಅಪಾದನೆ ಮಾಡುವುದಕ್ಕಾಗುವುದಿಲ್ಲ, The Vigilance Commission has to act according to the directions of the Government. ನಿನ್ನೆ ದಿವಸ ಈ ಸಭೆಯಲ್ಲಿ ತಾವು ಇರಲಿಲ್ಲ. ಈವೊತ್ತು ನನ್ನ ಮಿತ್ರರು ಏನು ಕೇಳುತ್ತಾರೆ ಎಂದರೆ ಅಲ್ಲಿ ಸಿಮೆಂಟ್ ಮೂಟೆ ಏನು ಇತ್ತೋ ಅದು ಬೇರೆ ಕಡೆಗೆ ಹೋಗಿದೆಯೋ ಏನೋ ಎಂದು ಹೇಳಿದ್ದಾರೆ. ಅಲ್ಲದೆ ಇವರು ಹೋಗಿದ್ದಾಗ ಅಲ್ಲಿ ಸಿಮೆಂಟ್ ಮೂಟೆ ಏನು ಇತ್ತು ಅದನ್ನು ಎಣಿಸುವುದಕ್ಕಾಗಲಿಲ್ಲವೇ ಎಂದು ಕೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್:—ಏತಕ್ಕೆ ಎಣಿಸುವುದಕ್ಕಾಗಲಿಲ್ಲ ಅನ್ನುವುದನ್ನು ವಿಜಿಲೆನ್ಸ್ ಕಮೀಶನ್ ಅವರನ್ನು ಕೇಳೋಣ. ಎಣಿಸಬಾರದೆಂದಾಗಲಿ ಅಥವಾ ವರದಿ ಕೊಡಬೇಡಿ ಎಂದಾಗಲಿ ಸರಕಾರ ಜಾಗೃತ ಕಮೀಷನ್‌ಗೆ ಆದೇಶ ನೀಡಿದೆ ಎನ್ನುವುದು ನಿಮ್ಮ ಭಾವನೆಯೇ ? Does it mean the Government has directed not to count ? with regard to Cement, we have said that Cement stock will be taken, it shall be verified; Stock of the Steel and other things should be known to us. If we had not made any specific remarks to the Cement etc., then I would have agreed with the Hon. Leader of the Opposition that we have made a mistake. If the Vigilance Commission takes time, how can we help it ?

Mr. Deputy SPEAKER.—The matter has been entrusted to the Vigilance Commission, which is a very responsible and quasi-judicial body and the matter has to be inquired into thoroughly. If discussions like this continues, I think it will not be helpful at all.

(INTERRUPTIONS)

ಶ್ರೀ ಕಾಗೋಡು ತಿಮ್ಮಪ್ಪ:—ಈ ರೀತಿ ನಮ್ಮ ಮೇಲೆ ಏತಕ್ಕೆ ಅಪಾದನೆ ಮಾಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್:—ನಾನೇನೂ ಅಪಾದನೆ ಮಾಡಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ:—ನಾನು ಒಂದೇ ಒಂದು ವಾಕ್ಯವನ್ನು ಹೇಳುತ್ತೇನೆ. ನಿನ್ನೆ ದಿವಸ ವಿಜಿಲೆನ್ಸ್ ಕಮೀಷನ್ ಜೊತೆಯಲ್ಲಿ ಅಲ್ಲಿಗೆ ಯಾರು ಅಧಿಕಾರಿಗಳು ಹೋಗಿದ್ದರೋ ಅವರ ಜೊತೆಗೆ ನಮ್ಮನ್ನು ಕಳುಹಿಸಿ ಎಂದು ಕೇಳಿದಾಗ್ಗೆ ಅವರುಗಳ ಜೊತೆಯಲ್ಲಿ ಕಳುಹಿಸುವುದಕ್ಕೆ ಸರಕಾರದವರು ಒಪ್ಪಿಗೆ ಕೊಡಲಿಲ್ಲ.

ಶ್ರೀ ಡಿ. ದೇವರಾಜ ಅರಸ್:—ಕೋಣಂದೂರು ಲಿಂಗಪ್ಪನವರು ಒಂದು ಸರಕಾರವನ್ನು ರಚಿಸಿದಾಗ ಆ ರೀತಿ ನಡೆಸಲಿ. ಯಾವ ಸರಕಾರದಲ್ಲೂ ಎಲ್ಲೂ ನಡೆಯದೆ ಇರತಕ್ಕಂಥ ಕಾನೂನನ್ನು ಇಲ್ಲಿ ಹೇಳುತ್ತಾ ಇದ್ದಾರೆ. ಈವೊತ್ತಿನ ದಿವಸ ವಿಜಿಲೆನ್ಸ್ ಕಮೀಷನ್ ಜೊತೆಯಲ್ಲಿ ಕಳುಹಿಸಿ ಎನ್ನುತ್ತಾರೆ, ಇನ್ನೊಂದು ದಿವಸ ಕಳ್ಳನನ್ನು ಹಿಡಿಯಬೇಕಾದರೆ ಪೋಲಿಸ ಜೊತೆಯಲ್ಲಿ ಕಳುಹಿಸಿ ಎನ್ನುತ್ತಾರೆ. ಅದಕ್ಕೆ ಆ ರೀತಿ ಕಳುಹಿಸುವುದಕ್ಕೆ ತಯಾರಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್:—ನಿನ್ನೆ ದಿವಸ ಶ್ರೀಮಾನ ಚನ್ನಬಸಪ್ಪನವರು ಒಪ್ಪಿಕೊಂಡು ಆ ಮೇಲೆ ಹೊರಳಿಕೊಂಡರು. ಬೇಕಾದರೆ ಪ್ರೊಸೀಡಿಂಗ್ಸ್ ತೆಗೆದುನೋಡಿ. ತಾವು ಕೊನೆಯಲ್ಲಿ ಹೇಳಿದ್ದು ನಿಜ. ಮೊದಲು ಆ ರೀತಿ ಹೇಳಿ ಒಪ್ಪಿಕೊಂಡು ಆ ಮೇಲೆ ಈ ರೀತಿ ಹೊರಳಿಕೊಂಡರೆ ಹೇಗೆ ?

Sri H. M. CHANNABASAPPA :—Please don't bring all those things. I have told in clear terms, officialy I cannot entrust the question of investigation to any non-official body or the individual, but if anybody wants to go and see what is going on, nothing prevents. I shall also request the Vigilance Commission unofficially. This is what I have said.

Mr. Deputy SPEAKER.—The Hon. Minister of Public Works has stated yesterday the same thing what he has mentioned now.

The House stands adjourned and will meet tomorrow at 9-00 A.M.

The House adourned at Twenty Minutes Past Six of the Clock to meet again at Nine of the Clock on Friday the 22nd March, 1974.